ಕಬ್ಬಿಗೆ ವಿಕರೂಪ ದರ ನಿಗದಿ ಬಗ್ಗೆ

362 (664) ಶ್ರೀ ಎಂ.ಎನ್. ಆತ್ಮಾನಂದ (ಮಂಡ್ಯ) : ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳಿಗೆ ರೈತರು ಸರಬರಾಜು ಮಾಡುವ ಕಬ್ಬಿಗೆ ಭವಿಷ್ಯದಲ್ಲಿ "ಎಕರೂಪ ದರ" ನಿಗದಿಪಡಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ. ಹಾಗಿದ್ದಲ್ಲಿ ಆ ಪ್ರಸ್ತಾವನೆಯ ವಿವರಗಳೇನು?

ಇ. "ಎಕರೂಪ ದರ" ನಿಗದಿಪಡಿಸುವಾಗ್ಗೆ ಸರ್ಕಾರ ಅನುಸರಿಸುವ ಮಾನದಂಡಗಳೇನು?

ಶ್ರೀ ಎಂ. ಮಹಾದೇವ್, (ಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ. ಇಲ್ಲ

ಆ. ಪ್ರಶ್ನೆ ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ

ರಾಜ್ಯದ ಕಬ್ಬು ಅಭಿವೃದ್ಧಿ ನಿಧಿಯಿಂದ ಕೈಗೊಂಡಿರುವ ರೈತರ ಕಲ್ಯಾಣ ಕಾರ್ಯಕ್ರಮ

364 (666) ಶ್ರೀ ಆತ್ಮಾನಂದ (ಮಂಡ್ಯ ಕ್ಷೇತ್ರ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳು ಕಬ್ಬು ಅಭಿವೃದ್ಧಿ ನಿಧಿಯಿಂದ ಪಡೆದು ಕೊಂಡಿರುವ ಅನುದಾನವೆಷ್ಟು? (ಕಾರ್ಖಾನೆಗಳ ಪ್ರತ್ಯೇಕ ವಿವರ ನೀಡುವುದು)

ಆ. ಕಬ್ಬು ಅಭಿವೃದ್ಧಿ ನಿಧಿಯನ್ನು ರೈತರಿಗೆ ಸಂಬಂದಿಸಿದಂತೆ ಯಾವ್ಯಾವ ಕಲ್ಯಾಣ ಕಾರ್ಯಕ್ರಮಕ್ಕೆ ವಿನಿಯೋಗಿಸಲಾಗಿದೆ ಇದರ ವಿವರಗಳೇನು?

ಶ್ರೀ ಎಂ.ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ. ರಾಜ್ಯದ ಸಕ್ಕರೆ ಕಾರ್ಖಾನೆಗಳು ಕೇಂದ್ರ ಸರ್ಕಾರದ ಕಬ್ಬು ಅಭಿವೃದ್ಧಿ ನಿಧಿಯಿಂದ ಪಡೆದುಕೊಂಡಿರುವ ಅನುದಾನದ ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಕಾರ್ಖಾನೆ ಹೆಸರು	ಅನುದಾನ ಮಂಜೂರಾದ ಮೊತ್ತ ರೂ. ಲಕ್ಷಗಳಲ್ಲಿ
1.	ಹಿರಣ್ಯಕೇಶಿ ಸಸಕಾ(ನಿ) ಸಂಕೇಶ್ವರ	178.50
2.	ಮೈಶುಗರ್ ಕಂ.(ನಿ) ಮಂಡ್ಯ	169.20
3.	ಕಂಪ್ಲಿ ಸಸಕಾ (ನಿ) ಕಂಪ್ಲಿ	47.99
4.	ಭದ್ರಾ ಸಸಕಾ(ನಿ) ದೊಡ್ಡಬಾತಿ	234.17
5.	ಚಾಮುಂಡೇಶ್ವರಿ ಶುಗರ್ಸ್ ಲಿ.	161.74
6.	ಗೋದಾವರಿ ಶುಗರ್ಸ್ ಸಮೀರವಾಡಿ	100.00